**ದಿಃ 02-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ 3 ರಿಂದ 5 ರ ಪರ ಶ್ರೀ ಎಸ್ ಟಿ ಟಿ ವಕೀಲರಿಂದಃ**

ನಮ್ಮ ಕುಟುಂಬದಲ್ಲಿ ನಾನು, ನನ್ನ ತಂದೆ, ತಾಯಿ, ಸಹೋದರಿ ಒಟ್ಟು 4 ಜನ ವಾಸವಾಗಿದ್ದೇವೆ ಅಂದರೆ ನಿಜ. ನನ್ನ ತಾಯಿ ಮದುವೆ ಸುಮಾರು 24 ವರ್ಷ ಅಂದರೆ ನಿಜ. ಮದುವೆ ಆದಾಗಿನಿಂದ ನಮ್ಮ ತಂದೆ ತಾಯಿ ಒಟ್ಟಿಗೆ ವಾಸವಾಗಿದ್ದಾರೆ ಅಂದರೆ ನಿಜ. ನಮ್ಮ ತಾಯಿ ಹುಷಾರಾಗಿದ್ದಾಳೆ ಅಂದರೆ ಸಾಕ್ಷಿ ಮೂರ್ಚೆ ರೋಗದಿಂದ ಬಳಲುತ್ತಿದ್ದಾರೆ ಅನ್ನುತ್ತಾರೆ. ನಮ್ಮ ತಾಯಿ ತಂದೆ 1ನೇ ಪ್ರತಿವಾದಿ ಮುಖ್ಯೋಪಾಧ್ಯಯರಾಗಿದ್ದರು ಅಂದರೆ ನಿಜ. ಸುಮಾರು 40 ವರ್ಷಗಳ ವರೆಗೆ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ ಅಂದರೆ ನಿಜ. 1 ನೇ ಪ್ರತಿವಾದಿಗೆ ಒಳ್ಳೆಯ ಸಂಬಳ ಇದೆ ಅಂದರೆ ನಿಜ. ಅದೇ ರೀತಿ ಒಳ್ಳೆಯ ಗಳಿಕೆ ಮಾಡಿದ್ದಾರೆ ಅಂದರೆ ನಿಜ. 2ನೇ ಪ್ರತಿವಾದಿಯು 3 ಮತ್ತು 4 ನೇ ಪ್ರತಿವಾದಿಯ ತಾಯಿ ಅಂದರೆ ನಿಜ. 2ನೇ ಪ್ರತಿವಾದಿಯ ಗಂಡ 2007 ರಲ್ಲಿ ಮರಣ ಹೊಂದಿದ್ದು, 2ನೇ ಪ್ರತಿವಾದಿಯು ಗಂಡ ಮರಣ ಹೊಂದಿದ ನಂತರ ಮನೆ ಬಿಟ್ಟುಹೋಗಿದ್ದು ಇಲ್ಲಿಯವರೆಗೆ ಪತ್ತೆ ಆಗಿಲ್ಲ ಅಂದರೆ ನಿಜ. ಪ್ರತಿವಾದಿ 3 ಮತ್ತು 4 ನೇದವರು 1ನೇ ಪ್ರತಿವಾದಿ ಆಶ್ರಯದಲ್ಲಿ ಬೆಳೆದಿದ್ದಾರೆ ಅಂದರೆ ನಿಜ.

ದಾವಾ ಜಮೀನುಗಳು 1ನೇ ಪ್ರತಿವಾದಿಗೆ ಹಿರಿಯರಿಂದ ಬಂದ ಆಸ್ತಿಗಳು ಅಂದರೆ ನಿಜ. 1ನೇ ಪ್ರತಿವಾದಿ ಹಾಗೂ ಆತನ ಸಹೋದರರ ಮಧ್ಯ ಆದ ವಾಟ್ನಿಯಲ್ಲಿ ದಾವಾ

ಜಮೀನುಗಳು ಕ್ರಮ ಸಂಖ್ಯೆ 1 ಮತ್ತು 3 ಇವು 1ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತವೆ ಅಂದರೆ ನಿಜ. 1ನೇ ಪ್ರತಿವಾದಿಯು ತನ್ನ ಪಾಲಿಗೆ ಬಂದ 2 ಎಕರೆ ಜಮೀನನ್ನು ತನ್ನ ಸಹೋದರ ಶಿವನಗೌಡನಿಗೆ ಕೊಟ್ಟು ಕ್ರಮ ಸಂಖ್ಯೆ 2 ರ ಆಸ್ತಿ 35 ಗುಂಟೆ ಜಮೀನು ಪಡೆದುಕೊಂಡಿದ್ದಾನೆ ಅಂದರೆ ನಿಜ. ಈ ಬಗ್ಗೆ ಡ ಉತಾರಗಳು ಆಗಿರುತ್ತವೆ ಅಂದರೆ ನಿಜ.

1ನೇ ಪ್ರತಿವಾದಿ, ವಾದಿ, ಹಾಗೂ 2ನೇ ಪ್ರತಿವಾದಿ ಗಂಡ ಮತ್ತು 3 ಮತ್ತು 4 ನೇ ಪ್ರತಿವಾದಿ ತಂದೆ ಮಂಜುನಾಥಗೌಡ 2001 ರಲ್ಲಿ ಪಾಲು ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ವಾದಿ ನೀಡಿದ ಒಪ್ಪಿಗೆ ಮೇರೆಗೆ ಸದರಿ ಪಾಲು 2ನೇ ಪ್ರತಿವಾದಿ ಗಂಡ ಮಂಜುನಾಥಗೌಡ ಇವರಿಗೆ ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಈ ಬಗ್ಗೆ ಡ ನಂ 1724 ರ ಪ್ರಕಾರ ಮಂಜುನಾಥಗೌಡ ಇವರ ಹೆಸರು ಆಸ್ತಿ ಉತಾರಗಳಲ್ಲಿ ದಾಖಲಾಗಿರುತ್ತದೆ ಅಂದರೆ ಸರಿಯಲ್ಲ. ಮಂಜುನಾಥಗೌಡ ತನ್ನ ಪಾಲಿಗೆ ಬಂದ ಆಸ್ತಿಗಳನ್ನು ತನ್ನ ಹೆಸರಿನಲ್ಲಿ ಇಟ್ಟುಕೊಂಡಿದ್ದು ನಂತರ ಅವುಗಳನ್ನು ಬದಲಾವಣೆ ಮಾಡಿಕೊಂಡಿರುವ ವಿಷಯ ವಾದಿಗೆ ಗೊತ್ತಿದೆ ಅಂದರೆ ಸರಿಯಲ್ಲ. ವಾದಿ ಸ್ವಇಚ್ಛೆಯಿಂದ ತನ್ನ ತಂದೆ ಹಾಗೂ ಸಹೋದರನ ಹೆಸರಿಗೆ ಆಸ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಮಂಜುನಾಥಗೌಡ ಮೃತಪಟ್ಟ ನಂತರ ಆತನ ವಾರಸುದಾರರು ತಮ್ಮ ಹೆಸರುಗಳನ್ನು ಆಸ್ತಿಗಳಲ್ಲಿ ದಾಖಲಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಈ ಬಗ್ಗೆ ಮ್ಯುಟೇಷನ ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ. ನನಗೆ ಮನೆಯ ವ್ಯವಹಾರಗಳ ಬಗ್ಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

ವಾರಸಾ ಪ್ರಕಾರ ಮಂಜುನಾಥಗೌಡ ಆತನ ವಾರಸುದಾರರ ಹೆಸರಿಗೆ ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿರುತ್ತವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳ ಹಿಂದಿನ ಉತಾರಗಳನ್ನು ನಾನು ನೋಡಿದ್ದೇನೆ. ಈ ಹಿಂದೆ ಹಕ್ಕು ಬದಲಾವಣೆ ಆಗಿರುವ ವಿಷಯಗಳು ನನಗೆ ಗೊತ್ತಿವೆ. ಹಕ್ಕು ಬದಲಾವಣೆಗಳು ನಮಗೆ ಬಾದಕವಾದರೆ ಅವುಗಳನ್ನು ಪ್ರಶ್ನಿಸುತ್ತಿದ್ದೆವು ಅಂದರೆ ನಿಜ. ದಾವಾ ಜಮೀನಗುಳು ಈಗಲೂ ಕೂಡಾ ಪ್ರತಿವಾದಿಯರ ಹೆಸರಿನಲ್ಲಿವೆ ಹಾಗೂ ಅವರೆ ಅವುಗಳ ಸ್ವಾಧೀನದಲ್ಲಿ ಇದ್ದಾರೆ ಅಂದರೆ ನಿಜ. ಹಕ್ಕು ಬದಲಾವಣೆ ಸಮಯದಲ್ಲಿ ವಾದಿ ಅನುಮತಿ ನೀಡಿದ್ದಾರೆ ಅಂದರೆ ಸರಿಯಲ್ಲ. ಹಕ್ಕು ಬದಲಾವಣೆ ವಿಷಯ ನಮ್ಮ ತಾಯಿಗೆ ಗೊತ್ತಿದೆ ಅಂದರೆ ನಿಜ. ವಾದಿ ತನ್ನ ಮದುವೆ ಸಮಯದಲ್ಲಿ ತಮ್ಮ ತಂದೆ ಸಾಕಷ್ಟು ಹಣ ಖರ್ಚು ಮಾಡಿಕೊಟ್ಟಿದ್ದರಿಂದ ಆಸ್ತಿಗಳಲ್ಲಿಯ ತನ್ನ ಹಕ್ಕು ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ವಾದಿ ದಾವಾ ಜಮೀನುಗಳಲ್ಲಿಯ ತನ್ನ ಹಕ್ಕುಬಿಟ್ಟುಕೊಟ್ಟಿದ್ದರಿಂದ ಅವುಗಳಲ್ಲಿ ಯಾವುದೆ ಪಾಲು ಇರುವುದಿಲ್ಲ ಅಂದರೆ ಸರಿಯಲ್ಲ.

1 ನೇ ಪ್ರತಿವಾದಿ ದಿನಾಂಕ 22.06.2024 ರಂದು ಮೃತಪಟ್ಟಿದ್ದಾರೆ ಅಂದರೆ ನಿಜ. ನಮ್ಮ ಅಜ್ಜಿ ನಿಂಗವ್ವ ಜೀವಂತ ಇದ್ದಾರೆ. ಪ್ರತಿವಾದಿ 3 ಮತ್ತು 4 ರವರು ನಿಂಗವ್ವ ಇವರನ್ನು ನೋಡಿಕೊಳ್ಳುತ್ತಿದ್ದಾರೆ ಅಂದರೆ ನಿಜ. ದಾವಾ ಅನುಸೂಚಿ-ಬ ರಲ್ಲಿಯ 1 ಮತ್ತು 2ನೇ ಆಸ್ತಿಗಳನ್ನು ಸೋಮನಗೌಡ ಖರೀದಿಸಿದ್ದರು ಅಂದರೆ ನಿಜ. ಸಾಕ್ಷಿ ಮುಂದುವರೆದು ಹೊಲದಿಂದ ಬಂದ ಆದಾಯದಿಂದ ಖರೀದಿಸಿದ್ದಾರೆ ಅನ್ನುತ್ತಾರೆ. ಮೃತ 1ನೇ ಪ್ರತಿವಾದಿ ನೌಕರಿ ಮಾಡುತ್ತಿದ್ದು ಸಾಕಷ್ಟು ಸಂಬಳ ಬರುತ್ತಿತ್ತು ಅಂದರೆ ನಿಜ. ನೌಕರಿಯಿಂದ ಬಂದ ಆದಯಾದಿಂದ ಬ ಆಸ್ತಿಗಳನ್ನು ಖರೀದಿಸಿದ್ದಾರೆ ಅಂದರೆ ಸರಿಯಲ್ಲ. ದಿನಾಂಕ 31.03.2004

ರಂದು ಬ ಆಸ್ತಿಗಳನ್ನು ಮೂಲ ಮಾಲೀಕ ಶಿವರುದ್ರಪ್ಪ ಚನ್ನಬಸಪ್ಪ ರೇವಣಕರ ಇವರಿಂದ ರೂ 10 ಲಕ್ಷಗಳಿಗೆ ಖರೀದಿಸಿದ್ದಾರೆ ಅಂದರೆ ನಿಜ. ಅನುಸೂಚಿ-ಬ ಆಸ್ತಿಯನ್ನು 1 ನೇ ಪ್ರತಿವಾದಿಯು ತನ್ನ ನೌಕರಿಯಿಂದ ಬಂದ ಹಣದಿಂದ ಖರೀದಿಸಿದ್ದು ಅದು ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ. 1ನೇ ಪ್ರತಿವಾದಿಯು ತನ್ನ ಆರ್ಥಿಕ ಅಡಚಣೆಗಾಗಿ ಅನುಸೂಚಿ-ಬ ರಲ್ಲಿಯ 2ನೇ ಆರೋಪಿಯನ್ನು 6 ನೇ ಪ್ರತಿವಾದಿಗೆ ರೂ 6 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ ಅಂದರೆ ನಿಜ. ಈಗ ಸದರಿ ಆಸ್ತಿ 6 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಅಂದರೆ ನಿಜ. ಸದರಿ ಆಸ್ತಿ ಮೇಲೆ ನಮಗಾಗಲಿ ಹಾಗೂ ಉಳಿದ ಪ್ರತಿವಾದಿಯರಿಗೆ ಯಾರಿಗೂ ಹಕ್ಕಿಲ್ಲ ಅಂದರೆ ಸರಿಯಲ್ಲ.

1ನೇ ಪ್ರತಿವಾದಿಯು ತನ್ನ ಜೀವಿತ ಕಾಲದಲ್ಲಿ ದಾವಾ ಅನುಸೂಚಿ-ಬ ರಲ್ಲಿಯ 1 ನೇ ಆಸ್ತಿಯನ್ನು ಪ್ರತಿವಾದಿ ನಂ 3 ಮತ್ತು 4 ರವರ ಹೆಸರಿಗೆ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ದಾನ ಪತ್ರ ನೋಂದಣಿ ಆಗಿದೆ ಎನ್ನುವದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರಾಗಿದ್ದರು ಅಂದರೆ ನಿಜ. 1ನೇ ಪ್ರತಿವಾದಿಯು ತನ್ನ ಸ್ವಇಚ್ಛೆಯಿಂದ 3 ಮತ್ತು 4 ನೇ ಪ್ರತಿವಾದಿಯರಿಗೆ ತನ್ನ ಆಸ್ತಿ ಸೇರಬೇಕೆನ್ನುವ ಉದ್ದೇಶದಿಂದ ದಾನ ಪತ್ರ ಮಾಡಿದ್ದಾರೆ ಅಂದರೆ ಸರಿಯಲ್ಲ. ಈಗ ದಾನ ಪತ್ರದ ಪ್ರಕಾರ ಬ ಅನುಸೂಚಿ-1 ರ ಆಸ್ತಿ 3 ಮತ್ತು 4 ನೇ ಪ್ರತಿವಾದಿಯರ ಹೆಸರಿನಲ್ಲಿ ಇರುತ್ತದೆ ಅಂದರೆ ನಿಜ. ಅನುಸೂಚಿ-ಬ ರಲ್ಲಿಯ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳ ಮೇಲೆ ವಾದಿಗೆ ಯಾವುದೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೆ ಹಕ್ಕು ಇಲ್ಲದಿದ್ದರೂ ಕೂಡಾ ಬೇರೆಯವರ ಮಾತು ಕೇಳಿ ಖೊಟ್ಟಿ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ಮನೆ ಆಸ್ತಿ ಮಾರಾಟದ ವಿಷಯ ವಾದಿಗೆ ಗೊತ್ತಿದೆ ಅಂದರೆ ನಿಜ. ನಮ್ಮ ತಂಗಿಯನ್ನು 3 ನೇ ಪ್ರತಿವಾದಿಗೆ ವಿವಾಹ ಮಾಡಿಕೊಡುವ ಬಗ್ಗ ಮಾತುಕತೆ ನಡೆದಿತ್ತು ಅಂದರೆ ನಿಜ. ಇತ್ತೀಚಿಗೆ 4 ನೇ ಪ್ರತಿವಾದಿ ಮದುವೆ ಆಗಿದ್ದಾನೆ ಅಂದರೆ ನಿಜ. 3 ಮತ್ತು 4 ನೇ ಪ್ರತಿವಾದಿಯರು ವಾದಿ ಮಾತು ಕೇಳಲಿಲ್ಲ ಎಂದು ಈ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ**

(ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.